ಮುಖ ಮುಚ್ಕಂಡು ಬಿದ್ಕಂಡ್ರೆ ಆ ನಮಪ್ಪನ್ ಗುಡಿ ಬಾಗ್ಲು ತೆಗ್ದು ಧೂಪ ದೀಪ ಹಚ್ಚುದ್ ಯಾರ್ಲ? ಹಂಗಂತ ಪೂಜಾರ್ತನ ಬುಟ್ಬುಟ್ರೆ ನಾಯಿ ಕಾದಂಗ್ ಕಾದವ್ರೆ. ಲಬಕ್ ಅಂತ ಅಟ್ಗಾಯ್ಸ್‌ಕೊಂತರೆ ನೋಡು ಮತ್ತೆ. ಆನಮ್ಮಪ್ಪ ಸಿದ್ದಪ್ಪಾಜಿಯಿಂದ ಇಷ್ಟುದಿನ ನಿಮ್ಮೆಲ್ಲಾ ಸಾಕುಂಬಂದವ್ನಿ. ಇನ್ಮೇಲೆ ನೀನು ವಸಿ ಜವಾಬ್ದಾರಿ ಹೊತ್ಕಂಬೇಕು ಮಗ. ನಿಮ್ ತಾತ ಬಡ್ಡಿ ಹೈದ ಎರಡೆರಡು ಎಂಡ್ರು ಮಾಡ್ಕಂಡು ನಮ್ಮೆಲ್ಲಾ ಹಿಂಸೆಗ್ ತಂದ್ ಮಡ್ಗವ್ನೆ. ನಮ್ಮವ್ವ ಇದ್ದಾಗ್ಲೆ ಸರ್‍ಯಾಗ್ ಆಸ್ತಿ ಹಂಚಿದ್ರೆ ಈ ಕಥ್ಯೆಲ್ಲಾ ಇತ್ತಾ? ಈಗ ಆ ನಿಮ್ ಚಿಕ್ಕಪ್ಪ ಬಾವಿ ತಾವ್ನ್ ಜಮೀನ್ನಾಗ ನಂಗೂ ಪಾಲ್ ಬರ್ಬೇಕು ಅಂತ ಕೇಸ್ ಹಾಕುಕೊಂಟಿದಾನಂತೆ. ಅದ್ಕೆ ಅಕೌಂಟೆಟ್ರು ಬಿರ್ನ್ ಬರೋಕೇಳವ್ರೆ. ನಾನ್ ವಸಿ ಕೊತ್ತನೂರು ಪಂಚಾಯ್ತಿ ತನ್ಕ ಹೋಗಿ ಇಚಾರ ತಿಳ್ಕಂಡ್ ಬತ್ತೀನಿ, ನೀನ್ ಗುಡಿ ಬಾಗ್ಲು ತೆಗ್ದು ಕಂಡಾಯ್ದೊರ್ಗೆ ಪೂಜೆ ಮಾಡ್ಕೊಡು ನನ್ ಕಂದ'. ಹೀಗೆ ಒಂದೇ ಸಮನೆ ಪೂಜಾರಿ ಬಸಯ್ಯನವರು ಮಾದೇಶನ ಕಾಲು ಕೆಳಗೆ ಕುಳಿತುಕೊಂಡು ಹೇಳುತ್ತಿದ್ದರೆ ಮೆತ್ತಗೆ ಹೊದಿಕೆ ತೆಗೆದು ತನ್ನಪ್ಪ ಅಲ್ಲೇ ಕುಳಿತಿರುವುದು ಖಾತ್ರಿಗೊಂಡು ಮತ್ತೆ ನಿದ್ದೆ ಹತ್ತಿದವನಂತೆ ಮಾದೇಶ ನಟಿಸಲಾರಂಭಿಸಿದ.

ಪೂಜಾರಿ ಬಸಯ್ಯನವರಿಗೆ ಮೂರು ಜನ ಮಕ್ಕಳು ಮೊದಲನೆ ಮಗ ಶಿವಣ್ಣ ಐ.ಟಿ.ಐ ಮುಗಿಸಿ ಹನೂರಿನಲ್ಲಿ ಒಂದು ಚಿಕ್ಕದಾದ ಮೆಕ್ಯಾನಿಕ್ ಶಾಪ್ ನಡೆಸುತ್ತಿದ್ದ. ಇನ್ನು ಎರಡನೆಯವಳು ಶಾಂತಿಯನ್ನು ತೆಳ್ಳನೂರಿನ ಪಟೇಲರ ಮನೆಗೆ ಮದುವೆ ಮಾಡಿಕೊಡಲಾಗಿತ್ತು. ಮೂರನೆಯವನು ಮಾದೇಶ ಹತ್ತನೇ ತರಗತಿ ಫೇಲ್ ಆಗಿದ್ದರಿಂದ ಯಾವುದೇ ಕೆಲಸ ಇಲ್ಲದೆ ಊರೂರು ಅಲೆಯುತ್ತಾ ನಿಂತಿದ್ದ. ಇದು ಪೂಜಾರಿ ಬಸಯ್ಯನವರಿಗೆ ತುಂಬಾ ಬೇಸರವನ್ನೇ ತಂದಿತ್ತು. ಹೇಗಾದರೂ ಮಾಡಿ ಅತನಿಗೊಂದು ದಾರಿ ಮಾಡಿಕೊಡಬೇಕು ಇಲ್ಲದಿದ್ದರೆ ಆತ ಕೆಟ್ಟು ಹೋಗುತ್ತಾನೆ ಎಂದು ನಿರ್ಧರಿಸಿದ ಬಸಯ್ಯ ಕೊತ್ತನೂರು ಪಂಚಾಯಿತಿಯ ಅಧ್ಯಕ್ಷ ಚುಂಚೇಗೌಡನ ಕೈ ಕಾಲು ಹಿಡಿದು ಆತನಿಗೆ ಪಂಚಾಯಿತಿಯಲ್ಲಿ ವಾಟರ್ ಮ್ಯಾನ್ ಕೆಲಸವೊಂದನ್ನು ಕೊಡಿಸಿದ್ದ. ಆದರೆ ತಿಂಗಳು ಕಳೆಯುವುದರಲ್ಲಿ ಮಾದೇಶ ಅಲ್ಲೂ ಕಿತಾಪತಿ ಮಾಡಿಕೊಂಡು ಕೆಲಸ ಬಿಟ್ಟು ಬಂದಿದ್ದ. ಇದು ಪೂಜಾರಿ ಬಸಯ್ಯನವರಿಗೆ ಇನ್ನಿಲ್ಲದ ಚಿಂತೆ ತರಿಸಿತ್ತು.

ಕೊನೆಗೆ ಆತ ಯಾವುದರಲ್ಲೂ ಯಶ ಕಾಣಲಾರನೆಂದೆನಿಸಿ ಹೇಗಾದರೂ ಮಾಡಿ ಅವನನ್ನು ಪೂಜಾರಿಕೆಗೆ ಹಚ್ಚುವುದೇ ಸರಿ ಎನಿಸಿತು. ತನಗೂ ವಯಸ್ಸಾಗುತ್ತಾ ಬಂತು. ಇವನನ್ನು ಬೇರೆ ಕೆಲಸಕ್ಕೆ ಹಚ್ಚಿದರೆ ತಲೆತಲಾಂತರದಿಂದ ತಮ್ಮ ಮನೆತನಕ್ಕೆ ಒಲಿದು ಬಂದಿದ್ದ ಪೂಜಾರಿಕೆ ಕೈ ತಪ್ಪಬಹುದು. ಆ ಮಂಟೆಲಿಂಗನ ಮಹಿಮೆಯೇ ಇರಬೇಕು. ಇವನ ಹಣೆಯಲ್ಲೂ ಅದೇ ಬರೆದಿದ್ದರೆ ಯಾವ ವಿಧಿ ತಾನೆ ಏನು ಮಾಡೀತು ಎಂದುಕೊಂಡ ಬಸಯ್ಯ ಅವನನ್ನು ಪೂಜಾರಿಕೆಗೆ ನೇಮಿಸಿದರೆ ಹೇಗೋ ಅವನ ಜೀವನವು ನಡೆಯುತ್ತದೆ. ತಲೆ ತಲಾಂತರದಿಂದ ಬಂದ ಮಂಟೆಲಿಂಗನ ಪೂಜಾರಿಕಾ ವೃತ್ತಿಗೂ ಒಂದು ದಾರಿ ಸಿಕ್ಕಂತಾಗುತ್ತದೆ ಎಂದು ತೀರ್ಮಾನಿಸಿದರು. ಆದರೆ ಅವನನ್ನು ಈ ಕೆಲಸಕ್ಕೆ ಒಪ್ಪಿಸುವುದೇ ಒಂದು ಕಷ್ಟವಾದ ಕೆಲಸವಾಗಿತ್ತು. ದೇವರು ದಿಂಡಿರು ಎಂದರೆ ಸಿಡಿದು ಬೀಳುತ್ತಿದ್ದ.

ಯಾರಾದರೂ, 'ಏನಪ್ಪ ಪೂಜಾರಪ್ನೋರ್ ಪುತ್ರ' ಎಂದರೆ ಸಾಕು, ಮಾದೇಶ ಅವರ ಮೇಲೆ ಇನ್ನಿಲ್ಲದಂತೆ ಜಗಳ ತೆಗೆಯುತ್ತಿದ್ದ. 'ಅಂಗ್ಯಾಕಂದಿರ್ಲಾ ಬಡ್ಡೆತ್ತಾವೆ, ಮಾದೇಶ ಅನ್ನಿ ಸಾಕು. ಅದು ನಮ್ಮಪ್ಪ ಕಣ್ರಲಾ ಪೂಜಾರಿ, ಪೂಜಾರಿ ಬಸಯ್ಯ ಅಂತ ನಮ್ಮಪ್ಪನ ಕರೀತಿರಲ್ಲ ಅಷ್ಟ್ ಸಾಕು, ನನ್ನೇನಾದ್ರು ಪೂಜಾರಿ ಗೀಜಾರಿ ಅಂದ್ರೆ ಮಕ್ಳ ಬುರ್ಡೆ ಬಿಸ್ನೀರ್ ಕಾಯ್ಸ್ ಬುಡ್ತೀನಿ' ಎಂದು ಕೆಂಡಾಮಂಡಲನಾಗುತ್ತಿದ್ದ.

ಅವನು ಹುಟ್ಟಿದಾಗಿಂದ ಒಂದು ದಿನವೂ ದೇವರು ದಿಂಡಿರು ಎಂದು ಕೈ ಮುಗಿದಿದ್ದು ಯಾರೂ ನೋಡಿರಲಿಲ್ಲ ಹಬ್ಬ-ಹರಿದಿನಗಳಲ್ಲೂ ಆತ ದೇವರು ದೇವಸ್ಥಾನ ಎಂದು ಅತ್ತ ತಲೆಯೂ ಹಾಕುತ್ತಿರಲಿಲ್ಲ. ವರ್ಷಕ್ಕೊಮ್ಮೆ ಜೋರಾಗಿ ನಡೆಯುತ್ತಿದ್ದ ಮಂಟೆಲಿಂಗನ ಜಾತ್ರೆಯಲ್ಲಿ ಬಸಯ್ಯನವರೊಬ್ಬರೆ ಪೂಜಾರಿಕೆಯಲ್ಲಿ ಬಸವಳಿದು ಹೋಗುತ್ತಿದ್ದುದ ಕಂಡು ಸುಶೀಲಮ್ಮ 'ಲೋ ಮಾದೇಶ. ಅಲ್ಲ ಕಣ್ಲಾ ನಿಮ್ಮಪ್ಪ ಒಬ್ರೆ ಬಡ್ದಾಡ್ತವ್ರೆ, ಹೋಗಿ ಚೂರು ಸಹಾಯ ಗಿಹಾಯ ಮಾಡುದ್ರಾಗುದಿಲ್ವೆ. ಜಾತ್ರೆಯಾಗ್ ಜನ ಜಾಸ್ತಿ ಅಂತ ಅವರು ಮನೆಗೆ ಬರೋದು ಹನ್ನೆರಡಾಯ್ತದೆ, ತಿರ್ಗ ಕೋಳ್ ಕೂಗೋಕು ಮುಂಚೆಯ ಎದ್ದೋಗ್ಬೇಕು' ಎಂದು ಬುದ್ಧಿವಾದ ಹೇಳಲು ಶುರುಮಾಡಿದರೆ 'ಅವ್ವೋ ಬೇಕಾದ್ರೆ ಹೋಗಿ